1992-93ರ ತಾಲ್ಲೂಕುವಾರು ಆಧ್ಯತಾ ಪ್ರದೇಶ ಗುರುತಿಸಿರುವ ಕಾರ್ಯ ಪ್ರಗತಿಯಲ್ಲಿದ್ದು, ಅನುದಾನ ಹಂಚಿಕೆಯನ್ನು ಏಪ್ರಿಲ್ 92 ಮಾಹೆಯಲ್ಲಿ ನಿಶ್ಚಿತಗೊಳಿಸಲಾಗುವುದು.

**ಅರಣ್ಯದಲ್ಲಿ ಒಣಗಿದ ಮರಗಳನ್ನು ಸೌದೆಯಾಗಿ ತರುವುದಕ್ಕೆ ಇರುವ ಕ್ರಮ**

**1564 (2140) ಶ್ರೀ ಕರಿಯಣ್ಣ (ಹೊಳೆಹೊನ್ನೂರು)**

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಅರಣ್ಯದಲ್ಲಿ ಸೌದೆಯ ರೂಪದಲ್ಲಿ ಒಣಗಿದ ಮರಗಳನ್ನು ತರಲು ಯಾವ ವ್ಯವಸ್ಥೆ ಮಾಡಲಾಗಿದೆ ;

ಆ) ಪ್ರತಿ ವರ್ಷ ರಾಜ್ಯದಿಂದ ಈ ರೀತಿ ಬರುವ ಮರವು ಎಷ್ಟು ಟನ್ನು ಆಗುತ್ತದೆ ;

ಇ) ಕಾಡಿಗೆ ಬೆಂಕಿ ತಗಲುವುದರಿಂದ ಒಣಗಿದ ಮರಗಳು ಸುಟ್ಟು ಕಾಡಿನ ಸಂಪತ್ತು ನಷ್ಟ ಆಗುವುದಕ್ಕೆ ಇಲಾಖೆಯವರು ಕೈಗೊಂಡ ರಕ್ಷಣೆಯ ಕ್ರಮಗಳೇನು ;

ಶ್ರೀ ಈ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)-

ಅ) ಈ ಕೆಲಸವನ್ನು ಕೆನರಾ ವೃತ್ತವನ್ನು ಬಿಟ್ಟು ರಾಜ್ಯಾದ್ಯಂತ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮದವರ ಜೊತೆ ಅರಣ್ಯ ಕೂಲಿಕಾರ ಸಹಕಾರ ಸಂಘಗಳು ಕೂಡಾ ಸುಮಾರು ಶೇಕಡಾ 50 ರಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ.

ಆ) 1,00,000 ಟನ್ನು.

ಇ) ಈ ಕೆಳಗೆ ಕಾಣಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ :-

1. ಕಾಡಿಗೆ ಬೆಂಕಿ ಬೀಳದ ರೀತಿಯಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುವುದರೊಳಗೆ, ಡಿಸೆಂಬರ್, ಜನವರಿ ತಿಂಗಳಲ್ಲಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಸಾಲುಗಳನ್ನು ನಿರ್ಮಿಸಿ ಈ ಸಾಲುಗಳಲ್ಲಿ ಇರುವ ಸೊಪ್ಪು ಸೌದೆಗಳನ್ನು ತೆಗೆದು ಸುಟ್ಟು ಆಕಸ್ಮಿಕ ಬೆಂಕಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗದ ಹಾಗೆ ನೊಡಿಕೊಳ್ಳಲಾಗುವುದು. ಮುಖ್ಯವಾದ ಅರಣ್ಯ ಪ್ರದೇಶಗಳಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಂಕಿ ನಿರೋಧಕ ಸಾಲುಗಳನ್ನು ನಿರ್ಮಿಸುವುದರ ಜೊತೆಗೆ ಬೆಂಕಿ ವೀಕ್ಷಕರನ್ನು ಕೂಡಾ ನೇಮಿಸಿಕೊಂಡು ಅರಣ್ಯ ಪ್ರದೇಶಕ್ಕೆ ಮತ್ತು ನೆಡುತೋಪುಗಳಿಗೆ ಬೆಂಕಿ ಬಾರದಂತೆ ನೋಡಿಕೊಳ್ಳಲಾಗುತ್ತಿದೆ.

2. ರಾಷ್ಟ್ರೀಯ ಉದ್ಯಾನವನಗಳು ಮತ್ತು ಪ್ರಾಣಿ ಧಾಮಗಳನ್ನು ಬಿಟ್ಟು ಯಾವ ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಒಣಗಿದ ಮರಗಳು ಇರುತ್ತದೆಯೇ ಅಲ್ಲಿಂದ ಈ ಒಣಗಿದ ಮರಗಳನ್ನು ಬೇಸಿಗೆ ಕಾಲಕ್ಕೆ ಮುಂಚಿತವಾಗಿಯೇ ಹೊರ ತೆಗೆಯಲಾಗುವುದು.

3. ಅರಣ್ಯ ಪ್ರದೇಶದ ಸುತ್ತ ಮುತ್ತಲಿನ ಜನಗಳಿಗೆ ಬೆಂಕಿಯಿಂದ ಅರಣ್ಯ ಸಂಪತ್ತಿಗೆ ಆಗುವ ವಿಪತ್ತುಗಳನ್ನು ವಿವರಿಸಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಬೀಳದ ಹಾಗೆ ಜನಗಳ ಸಹಕಾರವನ್ನು ಪಡೆಯಲಾಗುತ್ತಿದೆ.

4. ಒಂದು ವೇಳೆ ಅರಣ್ಯ ಪ್ರದೇಶಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರ ಮತ್ತು ಅಲ್ಲಿಯ ಜನಗಳ ಸಹಕಾರದಿಂದ ಆದಷ್ಟು ಬೇಗನೆ ಬೆಂಕಿಯನ್ನು ಆರಿಸಿ ಹೆಚ್ಚು ಪ್ರದೇಶಕ್ಕೆ ಬೆಂಕಿ ಆವರಿಸದಂತೆ

ನೋಡಿಕೊಳ್ಳಲಾಗುವುದು.

**ಬೆಳಗಾಂ ವಿಭಾಗದ ನಾಡ ಕಛೇರಿಗಳ ಕೆಲಸ ಕಾರ್ಯಗಳು.**

**1567 (2236)** ಶ್ರೀ ಬಿ.ಐ.ಪಾಟೀಲ್ (ಉಚ್ಚಗಾಂವ್)

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಬೆಳಗಾಂ ವಿಭಾಗದಲ್ಲಿ ನಾಡ ಕಛೇರಿಗಳು ಸಾಕಷ್ಟು ಸಿಬ್ಬಂದಿಯೊಂದಿಗೆ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೇ ;

ಆ) ಬೆಂಗಾಂ ವಿಭಾಗದ ನಾಡ ಕಛೇರಿಗಳಲ್ಲಿ ಖಾಲಿ ಇರುವ ಎಲ್ಲಾ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು ;

ಇ) ಈ ಹುದ್ದೆಗಳನ್ನು ತುಂಬದೇ ಇರಲು ಕಾರಣಗಳೇನು ;

ಈ) ಬೆಳಗಾಂ ವಿಭಾಗದ ನಾಡ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸರ್ಕಾರವು ಕೂಡಲೇ ತುಂಬುವುದೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು)-

ಅ) ಹೌದು.

ಆ) ಒಟ್ಟು 183 ಹುದ್ದೆಗಳು.

ಇ) ನಾಡ ಕಛೇರಿಗಳನ್ನು ರದ್ದುಪಡಿಸುವ, ಮುಂದುವರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಈ ಹುದ್ದೆಗಳನ್ನು ತುಂಬಿರುವುದಿಲ್ಲ.

ಈ) 'ಇ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ದಾವಣಗೆರೆ ನಗರಕ್ಕೆ ಹಾಲು ಪೂರೈಕೆಗೆ ಯೋಜನೆ**

**1568 (2244)** ಶ್ರೀ ವೈ.ಎಂ.ವೀರಣ್ಣ (ದಾವಣಗೆರೆ)

ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆಗೆ ವ್ಯವಸ್ಥೆಗಾಗಿ ನಾಲ್ಕೂವರೆ ಕೋಟಿ ರೂ.ವೆಚ್ಚದ ರಾಷ್ಟ್ರೀಯ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ನೆರವಿನ ದಿನವಹಿ 30,000 ಲೀಟರ್ ಹಾಲು ಸಂಗ್ರಹ ಸಾಮರ್ಥ್ಯದ ಪೂರ್ಣ ಪ್ರಮಾಣದ ಹಾಲಿನ ಡೈರಿ ಯೋಜನೆಯೊಂದನ್ನು ಹಿಂದಿನ ಜನತಾ ಸರ್ಕಾರದ ಅವಧಿಯಲ್ಲಿ ಮಂಜೂರು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹೊಸ ಸರ್ಕಾರದವರು ಈ ಬಗ್ಗೆ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು ; ಹಾಗಿದ್ದಲ್ಲಿ ಇದರ ವಾಸ್ತವಾಂಶವೇನು ;

ಇ) ಒಂದು ವೇಳೆ ಹಿಂದಿನ ಯೋಜನೆ ನಿಲುಗಡೆ ಯಾಗಿದ್ದರೆ ಪುನಶ್ಚೇತನ ನೀಡುವ ಕ್ರಮ ಕೈಗೊಳ್ಳಲಾಗುವುದೇ ;

ಈ) ಹಿಂದಿನ ಯೋಜನೆ ಇಲ್ಲದಿದ್ದರೂ ನಗರದ ನಾಗರೀಕರ ಹಿತದೃಷ್ಟಿಯಿಂದ ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಕ್ರಮ ಕೈಗೊಳ್ಳುತ್ತದೆಯೇ ;

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ, ಪಶುವೈದ್ಯ ಸೇವೆ ಸಚಿವರು)-

ಅ) ಇಲ್ಲಾ

ಆ) ಉದ್ಭವಿಸುವಿದಿಲ್ಲ.